# ಹೆಣ್ಣುಮಕ್ಕಳೇಕೆ ಕಡಿಮೆ?

**ಬೆಂಗಳೂರು ನಗರದಲ್ಲಿ ಹೆಣ್ಣುಮಕ್ಕಳ ಹುಟ್ಟಿನ ಸಂಖ್ಯೆ ತೀವ್ರವಾಗಿ ಕುಸಿಯಲು ಕಾರಣಗಳೇನು?**

‘ಹೆಣ್ಣುಮಕ್ಕಳೆಂದರೆ ಎಲ್ಲರಿಗೂ ಇಷ್ಟ; ಆದರೆ ಸ್ವಂತ ಹೆಣ್ಣು ಮಕ್ಕಳಲ್ಲ!’ ಈ ವಾಕ್ಯ ಕೇಳಲು ಸ್ವಲ್ಪ ವಿಚಿತ್ರ ಅನ್ನಿಸಬಹುದು. ಆದರೆ ಇದು ಬೆಂಗಳೂರು ಮಟ್ಟಿಗೆ ವಾಸ್ತವ. ಸಾಮಾನ್ಯವಾಗಿ ಯಾರೇ ಆದರೂ ಮುದ್ದು ಮಕ್ಕಳನ್ನು ಮಾತನಾಡಿಸುವಾಗ ಹೆಣ್ಣು ಮಕ್ಕಳ ಬಗ್ಗೆ ಹೆಚ್ಚು ಅಕ್ಕರೆ ಪ್ರಕಟಿಸುವುದು ಲೋಕರೂಢಿ. ಹೆತ್ತವರೂ ಅಷ್ಟೆ– ಹೆಣ್ಣುಮಕ್ಕಳೆಂದರೆ ಒಂದು ತೂಕ ಹೆಚ್ಚೇ ಪ್ರೀತಿ. ಮನೆಯಲ್ಲಿ ಸಣ್ಣ ಹೆಣ್ಣುಮಗುವೊಂದು ಉಂಟು ಮಾಡುವ ಸಂಭ್ರಮವೇ ಬೇರೆ. ಬಾಲ್ಯದಲ್ಲಿ ಗಂಡುಮಕ್ಕಳಿಗೂ ಹೆಣ್ಣು ಮಕ್ಕಳ ಉಡುಗೆ ತೊಡಿಸಿ ಸಂಭ್ರಮ ಪಡುವವರು ಸಾಕಷ್ಟಿದ್ದಾರೆ. ಆದರೆ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳ ಉಡುಗೆ ತೊಡಿಸಿ ಸಂಭ್ರಮಿಸುವವರು ಇಲ್ಲವೆಂದೇ ಹೇಳಬೇಕು.

ಇದೆಲ್ಲ ಏನನ್ನು ಸೂಚಿಸುತ್ತದೆ? ಹೆಣ್ಣು ಮಕ್ಕಳೆಂದರೆ ಗಂಡಿಗಿಂತ ಹೆಚ್ಚು ಮುದ್ದು ಎನ್ನುವುದನ್ನೇ. ಆದರೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೇ (ಎನ್‌ಎಫ್‌ಎಚ್‌ಎಸ್) ಇತ್ತೀಚೆಗೆ ನಡೆಸಿದ ಸಮೀಕ್ಷೆಯೊಂದು ಗಾಬರಿ ಹುಟ್ಟಿಸುವ ಸಂಗತಿಗಳನ್ನು ಬಹಿರಂಗಪಡಿಸಿದೆ. ಇಡೀ ದೇಶದ ಎಲ್ಲ ಮೆಟ್ರೊ ನಗರಗಳ, ಕಳೆದ ಐದು ವರ್ಷಗಳ ಅವಧಿಯ ಗಂಡು–ಹೆಣ್ಣು ಜನನ ಅನುಪಾತದ ಸಮೀಕ್ಷೆ ನಡೆಸಿದಾಗ, ಬೆಂಗಳೂರಿನಲ್ಲಿ ಅತ್ಯಂತ ಕಡಿಮೆ ಹೆಣ್ಣುಮಕ್ಕಳು ಜನಿಸುತ್ತಿದ್ದಾರೆ ಎನ್ನುವುದು ಗೊತ್ತಾಗಿದೆ! ಬೆಂಗಳೂರು ನಗರದಲ್ಲಿ ಜನಿಸುವ ಮಕ್ಕಳ ಅನುಪಾತ ಲೆಕ್ಕ ಮಾಡಿದಾಗ, ಪ್ರತಿ 1000 ಗಂಡು ಮಕ್ಕಳಿಗೆ ಕೇವಲ 727 ಹೆಣ್ಣು ಮಕ್ಕಳು ಮಾತ್ರ ಹುಟ್ಟುತ್ತಿದ್ದಾರೆ. ಅದೇ ಚೆನ್ನೈನಲ್ಲಿ 1000 ಗಂಡು ಮಕ್ಕಳಿಗೆ 1531 ಹೆಣ್ಣು ಮಕ್ಕಳು ಹುಟ್ಟಿದರೆ, ಮುಂಬೈನಲ್ಲಿ 1033, ಕೋಲ್ಕತ್ತಾದಲ್ಲಿ 1020 ಅನುಪಾತವಿದೆ. ಹೈದ್ರಾಬಾದ್‌ನಲ್ಲೂ ಸಾವಿರ ಗಂಡುಮಕ್ಕಳಿಗೆ 827 ಹೆಣ್ಣು ಮಕ್ಕಳು ಹುಟ್ಟುತ್ತಿದ್ದಾರೆ. ಇದ್ದುದರಲ್ಲಿ ಸಮಾಧಾನದ ಅಂಶವೆಂದರೆ ಬೆಂಗಳೂರು ಗ್ರಾಮೀಣ ಜಿಲ್ಲೆಯಲ್ಲಿ 1000 ಗಂಡು ಮಕ್ಕಳಿಗೆ 1313 ಹೆಣ್ಣುಮಕ್ಕಳು ಹುಟ್ಟುತ್ತಿವೆ ಎನ್ನುವುದು.

ಎಲ್ಲ ಮೆಟ್ರೊ ನಗರಗಳಿಗೆ ಹೋಲಿಸಿದರೆ ಬೆಂಗಳೂರು ನಗರದಲ್ಲಿ ಹೆಣ್ಣು ಮಗುವಿನ ಹುಟ್ಟು ಇಷ್ಟೊಂದು ಕಡಿಮೆ ಆಗಿರುವುದೇಕೆ ಎನ್ನುವುದು ತುರ್ತು ವಿಚಾರ ಮಾಡಬೇಕಾದ ಪ್ರಶ್ನೆಯೇ. ಕಾರಣ ಕಂಡುಹಿಡಿಯಲು ದೊಡ್ಡ ಸಂಶೋಧನೆಯ ಅಗತ್ಯವಿಲ್ಲ. ಬೆಂಗಳೂರು ನಗರದಲ್ಲಿ ಹೆಣ್ಣು ಭ್ರೂಣದ ಹತ್ಯೆ ಎಗ್ಗಿಲ್ಲದೆ ನಡೆಯುತ್ತಿದೆ ಎನ್ನುವುದೇ ಮೊದಲ ಕಾರಣ. ನಗರದಲ್ಲಿ ನಾಯಿಕೊಡೆಗಳಂತೆ ತಲೆ ಎತ್ತಿರುವ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಪ್ರಸವಪೂರ್ವ ಭ್ರೂಣ ಪತ್ತೆ ಪರೀಕ್ಷೆ ನಡೆಯುವುದು ಗುಟ್ಟಿನ ಸಂಗತಿ ಏನೂ ಅಲ್ಲ. ಕೆಲವು ವರ್ಷಗಳ ಹಿಂದೆ, ಅಧಿಕಾರಿಗಳು ಸ್ಕ್ಯಾನಿಂಗ್ ಸೆಂಟರ್‌ಗಳ ಮೇಲೆ ದಾಳಿ ಮಾಡುವುದೂ ನಡೆದಿತ್ತು. ಆದರೆ ಇತ್ತೀಚೆಗೆ ಖಾಸಗಿ ವೈದ್ಯಕೀಯ ಕ್ಷೇತ್ರದ ಮೇಲೆ ಸರ್ಕಾರದ ಹಿಡಿತ ಪೂರ್ಣ ತಪ್ಪಿಹೋದಂತಿದೆ. ಗರ್ಭಧಾರಣೆ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ಕಾಯ್ದೆ (ಪಿಸಿಪಿಎನ್‌ಡಿಟಿ)ಯ ಕಠಿಣ ಅನುಷ್ಠಾನವೂ ನಡೆಯುತ್ತಿಲ್ಲ. ಪ್ರಸವಪೂರ್ವ ಭ್ರೂಣ ಲಿಂಗ ಪತ್ತೆಯ ಮೇಲೆ ಕಣ್ಣಿಡಲು ಹಿಂದೆ ಜಿಲ್ಲಾ ಮಟ್ಟದ ಸಮಿತಿಗಳೂ ಇದ್ದವು. ಆದರೆ ಕಳೆದ ಮೂರು ವರ್ಷಗಳಿಂದ ಈ ಸಮಿತಿಗಳೂ ಕೆಲಸ ಮಾಡುತ್ತಿಲ್ಲ.

ಸರ್ಕಾರಿ ಅಧಿಕಾರಿಗಳನ್ನು ಈ ಬಗ್ಗೆ ಕೇಳಿದರೆ, ಹೆಣ್ಣು ಮಕ್ಕಳ ಹುಟ್ಟಿನ ಸಂಖ್ಯೆ ಕಡಿಮೆಯಾಗಲು ಬೇರೆ ಕಾರಣಗಳಿವೆ ಎನ್ನುತ್ತಾರೆ. ಅವರ ಪ್ರಕಾರ, ಹೆಚ್ಚು ಹೆಚ್ಚು ಜನರು ಒಂದೇ ಮಗು ಸಾಕು ಎನ್ನುತ್ತಿದ್ದಾರಂತೆ. ಮೊದಲ ಮಗು ಗಂಡಾದರೆ, ಆ ಬಳಿಕ ಮಗು ಬೇಡ ಎಂದು ಜನರು ನಿರ್ಧರಿಸುತ್ತಾರಂತೆ. ‘ಹಾಗಾದರೆ ಈ ಮನೋಭಾವ ಕೇವಲ ಬೆಂಗಳೂರು ನಗರದಲ್ಲಿ ಮಾತ್ರ ಏಕೆ ಇದೆ? ಬೆಂಗಳೂರು ಗ್ರಾಮೀಣ ಜಿಲ್ಲೆಯಲ್ಲಿ ಏಕೆ ಇಲ್ಲ?’ ಎಂದು ಕೇಳಬೇಕಾಗುತ್ತದೆ. ‘ಬೆಂಗಳೂರು ನಗರಕ್ಕೆ ರಾಜ್ಯದ ಉಳಿದ ಜಿಲ್ಲೆಗಳಿಂದ ದೊಡ್ಡ ಪ್ರಮಾಣದಲ್ಲಿ ವಲಸೆ ನಡೆಯುತ್ತಿದೆ. ವಲಸೆ ಬರುವ ಬಹುತೇಕರು ಗಂಡುಮಕ್ಕಳು. ಹಾಗಾಗಿ ಗಂಡು–ಹೆಣ್ಣು ಅನುಪಾತದಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆ ಇದೆ’ ಎನ್ನುವುದು ಅಧಿಕಾರಿಗಳು ನೀಡುವ ಇನ್ನೊಂದು ಕಾರಣ. ಇಲ್ಲೂ ಪ್ರಶ್ನೆ ಉದ್ಭವಿಸುತ್ತದೆ. ಬೆಂಗಳೂರಿಗೆ ಹೋಲಿಸಿದರೆ ಅತ್ಯಧಿಕ ವಲಸೆ ನಡೆಯುವುದು ಮುಂಬೈ ಷಹರದಲ್ಲಿ. ಅಲ್ಲೇಕೆ ಹೆಣ್ಣು ಮಕ್ಕಳ ಅನುಪಾತ ಹೆಚ್ಚಿದೆ?

ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾದ ಸಂಗತಿಯಿದು. ಪಿಸಿಪಿಎನ್‌ಡಿಟಿ ಕಾಯ್ದೆಯನ್ನು ಕಠಿಣವಾಗಿ ಅನುಷ್ಠಾನಕ್ಕೆ ತರಬೇಕು. ಜಿಲ್ಲಾ ಮಟ್ಟದ ಸಮಿತಿಗಳನ್ನು ಪುನರ್ರಚನೆ ಮಾಡಿ ಕಣ್ಗಾವಲನ್ನು ಬಿಗಿಗೊಳಿಸಬೇಕು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಈ ನಿಟ್ಟಿನಲ್ಲಿ ಸಾಮಾಜಿಕ ಎಚ್ಚರ ಮೂಡಿಸಲೂ ಕ್ರಮಗಳನ್ನು ಕೈಗೊಳ್ಳಬೇಕು.

■ **ಬಿ.ಎಂ.ಹನೀಫ್**



ಈಶ್ವರ್